ಈ ರೀತಿಯ ಅಸಮಾನತೆ ಮಾಡಬಾರದೆಂದೂ ಸೂಚನೆ ಕೊಟ್ಟಿದ್ದರೂ ಕೂಡ ಈ ರೀತಿ ಏಕೆ ಆಯಿತು? ಮುಂದಿನ ವರ್ಷವಾದರೂ ಈ ಅಸಮಾನತೆಯನ್ನು ಸರಿಪಡಿಸುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್.—ಇದರಲ್ಲಿ ತಲಾವಾರು ಅನುದಾನ ಕೊಡುವುದೂ ಕೂಡ ವರ್ಗ ಗಿರಲ್ಲಿ ಬರುವುದು ಮಂಡಲ್ ಪಂಚಾಯ್ತಿಗಳಿಗೆ ಕೊಡುವುದು ಏಳೂವರೆ ರೂಪಾಯಿ ಜಿಲ್ಲಾ ಪರಿಷತ್ತಿಗೆ ಎರಡೂವರೆ ರೂಪಾಯಿ ತಲಾವಾರು ಕೊಡಬೇಕಾದ್ದು. ಆದರೆ ಅಭಿವೃದ್ಧಿ ಕಾರ್ಯಗಳಿಗೆ ಕೊಡತಕ್ಕ ಯೋಜನಾ ವೆಚ್ಚ ಏನಿದೆ. ಅದು ಜಿಲ್ಲಾಪರಿಷತ್ತಿನವರು ತಯಾರು ಮಾಡಿರತಕ್ಕ ಯೋಜನೆಗಳಿಗನುಗುಣವಾಗಿ, ಕೆಲಸಕಾರ್ಯಗಳಾಗಿರುತ್ತವೆ. ಈ ದೃಷ್ಟಿಯಿಂದ ದೇಶಪಾಂಡೆಯವರು ಈ ವಿಷಯವನ್ನು ಆ ಸಂದರ್ಭದಲ್ಲಿ ಹೇಳಿರಬಹುದು. ಇಲ್ಲಿ ಪಶ್ಚಿಮಘಟ್ಟಗಳ ಯೋಜನೆಯಲ್ಲಿ ೩೬ ಲಕ್ಷ ರೂಪಾಯಿ ಬೆಳಗಾಂ ವಿಭಾಗದಲ್ಲಿ ಒಂದು, ಚಿಕ್ಕೋಡಿ ವಿಭಾಗದಲ್ಲಿ ಒಂದು ರೂಪಾಯಿ ಕೂಡ ಖರ್ಚು ಮಾಡಿಲ್ಲ. ಖಾನಾಪುರದಲ್ಲಿ ಹೆಚ್ಚು ಖರ್ಚಾಗಿದೆ ಎಂದು ತಾವು ಹೇಳಿದ್ದೀರಿ. ಈ ರೀತಿಯ ಪ್ರಾದೇಶಿಕ ಅಸಮಾನತೆ ಆಗದಂತೆ, ಯಾವುದೇ ಕ್ಷೇತ್ರಕ್ಕೆ ಹೆಚ್ಚು ಪಕ್ಷಪಾತವಾಗದಂತೆ ನೋಡಿ ಕೊಳ್ಳಬೇಕು ಎನ್ನುವ ಮಾರ್ಗಸೂಚಿಯನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಚಂದ್ರಶೇಖರ್ ಎಂ. ಮಾವಿನಿ.—ಪಶ್ಚಿಮಘಟ್ಟ ಯೋಜನೆ ಚಿಕ್ಕೋಡಿ ವಿಭಾಗಕ್ಕೆ ಇಲ್ಲವೇ ಇಲ್ಲ. ಬೆಳಗಾಂ ವಿಭಾಗಕ್ಕೆ ಮಾತ್ರ ಇರುವುದು. ಖಾನಾಪುರ ವಿಭಾಗಕ್ಕೆ ೩೬ ಲಕ್ಷ ಬಂದು. ನನ್ನ ಕ್ಷೇತ್ರಕ್ಕೆ ೨ ಲಕ್ಷ ಮಾತ್ರ ಬಂದಿದೆ. ಇದನ್ನು ಸರಿಪಡಿಸುವಂತೆ ವಿನಂತಿಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ತಿಳಿದುಕೊಂಡಿದ್ದೇನೆ. ಒಳ್ಳೆಯ ಮಾತನ್ನು ಹೇಳಿದ್ದಾರೆ. ಈ ರೀತಿಯಾಗಿ ಒಂದು ತಾಲ್ಲೂಕಿಗೆ ಎರಡು ಲಕ್ಷ ಬೇರೆ ತಾಲ್ಲೂಕಿಗೆ ೩೬ ಲಕ್ಷ ಕೊಡುವುದು ಯೋಗ್ಯವಲ್ಲ. ಇದರ ಬಗ್ಗೆ ಸೂಚನೆಯನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್. ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಒಂದು ಪ್ರಮಾದವಾಗಿದೆ. ಪ್ರಶ್ನೆ ನಂಬರ್ ೨೦೭ (೭೬೮) ನಾನು ಕೇಳುವ ಪ್ರಶ್ನೆ ಅಲ್ಲ. ಇದು ತುರುವೇಕೆರೆ ಕ್ಷೇತ್ರದ್ದು. ರಾಮಕೃಷ್ಣಯ್ಯನವರು ಇದನ್ನು ಕೇಳಬೇಕು. ನಿಮ್ಮ ವಿಧಾನ ಮಂಡಲದ ಅಧಿಕಾರಿಗಳು ಈ ರೀತಿ ಕೆಲಸ ಮಾಡುತ್ತಾರೆ. ನೀವು ಆ ರೀತಿಗೆ ಸ್ವಲ್ಪ ಬುದ್ಧಿ ಹೇಳಿ. ತುರುವೇಕೆರೆ ವಿಚಾರ ಕಟ್ಟಿಕೊಂಡು ನನಗೇನಾಗಬೇಕು.

ಶ್ರೀ ಎಂ.ಪಿ. ಪ್ರಕಾಶ್.—ಇದು ತುರುವೇಕೆರೆಗೆ ಸಂಬಂಧಪಟ್ಟಿರುವುದರಿಂದ, ಈ ವಿಷಯವನ್ನು ಬಾಬುರೆಡ್ಡಿ ತುಂಗಳ್ ಅವರು ಕೇಳಿಲ್ಲವೆಂದು ನನಗನಿಸಿತು. ಆದರೂ, ಯಾರು ಇದನ್ನು ಕಳುಹಿಸಿದ್ದಾರೆ, ಅವರಿಗೇ ಉತ್ತರ ಕೊಡುತ್ತೇನೆ. ಒಂದು ಊರಿನ ಪ್ರಶ್ನೆ ಕೇಳಿದ್ದಾರೆ.

ಶ್ರೀ ಎಂ. ರಘುಪತಿ.—ಪ್ರಶ್ನೆ ಕೇಳುವವರ ಹೆಸರು ಪಟ್ಟಿಯಲ್ಲಿ ಇಲ್ಲದೇ ಇರುವುದರಿಂದ ಅವರು, ತಮ್ಮ ಹೆಸರು ಇಲ್ಲವೆಂದು ಹೊರಟು ಹೋಗಿದ್ದಾರೆ. ಆದ್ದರಿಂದ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಬೇಕು.

ಉಪಾಧ್ಯಕ್ಷರು.—೨೦೭(೭೬೮)ರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಬೆಂಗ್ರೆ ಮಂಡಲ ಪಂಚಾಯತ್

(೯೯೦) ೨೦೮ ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಪಶು ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಮಂಗಳೂರಿನ ಸಮೀಪದ ಬೆಂಗ್ರೆಯಲ್ಲಿ ಸುಮಾರು ನಾಲ್ಕು ಸಾವಿರ ಜನರು ವಾಸ ಮಾಡುತ್ತಿರುವುದು ನಿಜವೆ?

ಆ) ಈ ಪ್ರದೇಶದಲ್ಲಿ ಮಂಡಲ ಪಂಚಾಯತ್ ಸಹ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಪ್ರದೇಶಕ್ಕೆ ಯಾವ ಸವಲತ್ತುಗಳು ಇಲ್ಲದೆ ಜನರು ಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಈ ಪ್ರದೇಶದ ಜನತೆಯು ಆ ಪ್ರದೇಶವನ್ನು ಮಂಗಳೂರು ಮಹಾನಗರಪಾಲಿಕೆಗೆ ಸೇರಿಸಿಕೊಳ್ಳಲು ೩ ವರ್ಷಗಳಿಂದ ಮನವಿ ಸಲ್ಲಿಸುತ್ತಿರುವುದು ನಿಜವೆ?

ಉ) ಹಾಗಿದ್ದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) —ಹೌದು—

ಆ) —ಹೌದು—

ಇ) —ಇಲ್ಲ—

ಈ) —ಹೌದು—

ಉ) ಬೆಂಗ್ರೆ ಪ್ರದೇಶವನ್ನು ಮಂಗಳೂರು ಮಹಾನಗರಪಾಲಿಕೆಗೆ ಸೇರಿಸಿಕೊಳ್ಳಲು ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಆಕ್ಷೇಪಣೆ ಮತ್ತು ಸಲಹೆಗಳನ್ನು ನೀಡುವಂತೆ ಪ್ರಕಟಿಸಲಾಗಿದೆ. ಈ ಬಗ್ಗೆ ಸ್ವೀಕರಿಸಿರುವ ಸಲಹೆ ಆಕ್ಷೇಪಣೆಗಳು ಪರಿಶೀಲನೆಯಲ್ಲಿದೆ.

೩-೦೦ ಪಿ. ಎಂ.

ಶ್ರೀ ಬಿ. ಎಂ. ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೇ, ಬೆಂಗರೆ ಪ್ರದೇಶದಲ್ಲಿ ಸುಮಾರು ನಾಲ್ಕು ನಾಲ್ಕೂವರೆ ಸಾವಿರ ಜನ ಇದ್ದಾರೆ. ಅವರಿಗೆ ಮಂಡಲ್ ಪಂಚಾಯತ್ ಇಲ್ಲ. ಅವರ ಪೈಕಿ ಜಿಲ್ಲಾ ಪರಿಷತ್ ಸದಸ್ಯರು ಇಲ್ಲ. ಮಂಡಲ್ ಪಂಚಾಯತ್ ಓಟ್ ಇಲ್ಲ ಜಿಲ್ಲಾ ಪರಿಷತ್ ಓಟು ಇಲ್ಲ. ಪುಣ್ಯಕ್ಕೆ ಏನೋ ಎಂ, ಎಲ್, ಎ ಓಟು ಉಂಟು. ಪಾರ್ಲಿಮೆಂಟು ಓಟೂ ಉಂಟು. ಅಲ್ಲಿ ಅನೇಕ ತೊಂದರೆಗಳು ಉಂಟಾಗಿವೆ. ಅಲ್ಲಿನ ಜನರು ಹೇಳುತ್ತಿರುವಂತೆ ಇದನ್ನು ಮಂಡಲ್ ಪಂಚಾಯತ್‌ಗೆ ಸೇರಿಸಿ ಅಥವಾ ನಗರಪಾಲಿಕೆಗಾದರೂ ಸೇರಿಸಿ. ಕಳೆದ ಮೂರು ನಾಲ್ಕು ವರ್ಷಗಳಿಂದ ಇದನ್ನು ಕೇಳುತ್ತಿದ್ದಾರೆ. ತಾವು ಇಲ್ಲಿ ಬೆಂಗ್ರೆ ಪ್ರದೇಶವನ್ನು ಮಂಗಳೂರು ಮಹಾನಗರಪಾಲಿಕೆಗೆ ಸೇರಿಸಿಕೊಳ್ಳಲು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಆಕ್ಷೇಪಣೆ ಮತ್ತು ಸಲಹೆಗಳನ್ನು ನೀಡುವಂತೆ ಪ್ರಕಟಿಸಲಾಗಿದೆ, ಈ ಬಗ್ಗೆ ಸ್ವೀಕರಿಸಿರುವ ಸಲಹೆ ಆಕ್ಷೇಪಣೆಗಳು ಪರಿಶೀಲನೆಯಲ್ಲಿವೆ ಎಂದು ಹೇಳಿದರಿ. ಆಕ್ಷೇಪಣೆ ಇಲ್ಲದೇ ಇದ್ದರೆ ತೀರ್ಮಾನವಾಗಿ ಈ ಕೆಲಸ ಮಾಡಬೇಕು. ಅವರು ಬಹಳ ಕಷ್ಟದಲ್ಲಿ ಇರುತ್ತಾರೆ. ಪರಿಶೀಲನೆ ಎಂದರೆ ದಿರ್ಘವೂ ಆಗಬಹುದು, ತೀರ್ಮಾನವೂ ಆಗಬಹುದು. ಆದಷ್ಟೂ ಶೀಘ್ರವಾಗಿ ಈ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಿ ಈ ಮೂರು ನಾಲ್ಕು ಸಾವಿರ ಜನರಿಗೆ ಉಪಕಾರ ಮಾಡುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಹೇಳುವುದರಲ್ಲಿ ನಿಜವಾಗಿಯೂ ಬಹಳ ಜ್ವಲಂತ ಸಮಸ್ಯೆ ಇದೆ. ನಾನುಹೇಳಿದಹಾಗೆ ನೋಟಿಫಿಕೇಷನ್ ಮಾಡಿರುತ್ತೇವೆ. ಅದರ ಬಗ್ಗೆ ಈಗ ಅಲ್ಲಿ ಕೌನ್ಸಿಲ್ ಇದ್ದಾಗ ಆಬ್ಜೆಕ್ಷನ್ಸ್ ಬಂದಿದೆ. ಈಗ ಕೌನ್ಸಿಲ್ ಹೋಗಿ ಆಡ್ಮಿನಿಸ್ಟ್ರೇಟರ್ ಬಂದಿದ್ದಾರೆ. ಆದರೂ ಸಹ ಅದಷ್ಟು ಬೇಗ ಇದರ ಬಗ್ಗೆ ಸರಕಾರ ಕ್ರಮ ತೆಗೆದುಕೊಳ್ಳುತ್ತದೆ.

ನಜೀರ್ ಆವಾಸ್ ಯೋಜನೆಗೆ ಹಣ

೨೦೯ (೮೫೯) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಸಂಕೇಶ್ವರ) — ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ನಜೀರ್ ಆವಾಸ್ ಯೋಜನೆಗೆ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾಗಿರುವ ಹಣವೆಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಕೇಂದ್ರ ಸರ್ಕಾರದಿಂದ ಬಂದಿರುವ ಹಣವನ್ನು ಈ ಯೋಜನೆಗೆ ವರ್ಗಾಯಿಸಿರುವುದು ನಿಜವೇ ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು). ಅ) ತಖ್ತೆ ೧ ಲಗತ್ತಿಸಿದೆ

ಆ) ಇಲ್ಲಾ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಹಣವನ್ನು ೫೦ : ೫೦ರ ಪ್ರಮಾಣದಲ್ಲಿ ಒದಗಿಸುತ್ತದೆ.

ನಜೀರ್ ಆವಾಸ್ ಯೋಜನೆಯಲ್ಲಿ ಜಿಲ್ಲಾವಾರು ಬಿಡುಗಡೆಯಾದ ಹಣ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಡಿಯಲ್ಲಿ (ಲಕ್ಷ ರೂ. ಗಳಲ್ಲಿ)

ಕ್ರಮ ಸಂಖ್ಯೆ	ವಿಭಾಗ	ದಿನಾಂಕ ೧೭–೨–೮೯ ರಂದು ಬಿಡುಗಡೆ ಮಾಡಿದ್ದು	ಶೇ. ೨೫ರ ರಾ. ಉ. ಯೋಜನೆಯ ಆನುದಾನವನ್ನು ದಿನಾಂಕ ೩೦–೪–೮೮, ೧೧–೭–೮೮ ಮತ್ತು ೧೨–೧೦–೮೮ ಈ ರೀತಿ ಬಿಡುಗಡೆ ಮಾಡಿರುತ್ತದೆ.
೧)	ಬೆಂಗಳೂರು (ನ)	೧೦.೦೦೦	೯,೬೫೫
೨)	ಬೆಂಗಳೂರು (ಗ್ರಾ)	೪೦.೦೦೦	೨೮.೮೭೨
೩)	ಕೋಲಾರ	೫೦.೦೦೦	೩೭.೩೫೦
೪)	ತುಮಕೂರು	೪೫,೧೦೦	೩೪.೦೨೪
೫)	ಚಿತ್ರದುರ್ಗ	೪೦.೦೦೦	೩೧.೮೦೪
೬)	ಶಿವಮೊಗ್ಗ	೩೫.೦೦೦	೨೬.೭೮೮
	ಒಟ್ಟು ಮೊತ್ತ–೧	೨೨೦.೦೦೦	೧೬೮.೪೫೦
೭)	ಮೈಸೂರು	೩೦.೦೦೦	೪೧.೮೯೦
೮)	ಮಂಡ್ಯ	೩೦.೦೦೦	೨೨.೪೯೨
೯)	ಹಾಸನ	೨೫.೦೦೦	೧೯.೭೬೬
೧೦)	ಚಿಕ್ಕಮಗಳೂರು	೧೦.೦೦೦	೧೫ ೧೬೮
೧೧)	ಕೊಡಗು	೧೦,೦೦೦	೧೫.೧೬೮
೧೨)	ದಕ್ಷಿಣ ಕನ್ನಡ	೩೦.೦೦೦	೨೫.೫೦೫
	ಒಟ್ಟು ಮೊತ್ತ–೧೧	೧೪೫-೦೦೦	೧೩೧.೯೨೮